

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಎಲುಬಿಲ್ಲದ ನಾಲಿಗೆ

**ಬೇ**ಸಿಗೆಯ ರಜೆ ಮುಗಿದು ಶಾಲೆಗಳು ಆರಂಭವಾಗಿವೆ. ಮಕ್ಕಳನ್ನು ಒಳ್ಳೆಯ ಶಾಲೆಗಳಿಗೆ ಸೇರಿಸಬೇಕೆಂದು ತಂದೆತಾಯಂದಿರ ತವಕ. ತಮ್ಮ ಮಕ್ಕಳು ಚೆನ್ನಾಗಿ ಓದಿ ಮುಂದೆ ಡಾಕ್ಟರೋ, ಎಂಜಿನಿಯರೋ, ಐಎಎಸ್ ಅಧಿಕಾರಿಯೋ ಆಗಬೇಕೆಂದು ಅವರ ಕನಸು. ಎಳೆಯ ವಯಸ್ಸಿನ ಮಕ್ಕಳಿಗೆ ತಮ್ಮ ಭವಿಷ್ಯಜೀವನದ ಬಗ್ಗೆ ಯಾವ ಪರಿಕಲ್ಪನೆಯೂ ಇಲ್ಲ. ಶಾಲೆಯಲ್ಲಿ ಓದುವುದಕ್ಕಿಂತ ಹೆಚ್ಚಾಗಿ ಓರಿಗೆಯ ಮಕ್ಕಳೊಂದಿಗೆ ಆಟವಾಡುವ ಮನಸ್ಸು. ಹಳ್ಳಿಯ ಶಾಲೆಗಳಲ್ಲಿ ಇನ್ನೂ ಪಾಠಗಳು ಆರಂಭವಾಗಿಲ್ಲ. ಮಕ್ಕಳೇನೋ ಉತ್ಸಾಹದಿಂದ ಶಾಲೆಗೆ ಹೋಗುತ್ತಿದ್ದಾರೆ. ಆದರೆ ಮಕ್ಕಳಿಗಿಂತ ಹೆಚ್ಚಾಗಿ ಅಧ್ಯಾಪಕರೇ ರಜೆಯ ಗುಂಗಿನಲ್ಲಿ ಇರುವಂತೆ ತೋರುತ್ತದೆ.

ಯೂರೋಪ್ ಮತ್ತು ಅಮೇರಿಕೆಯ ಶಾಲೆಗಳಲ್ಲಿ ಅಧ್ಯಾಪಕರು ಮಕ್ಕಳಿಂದ ಆಡಿಸುವ ಒಂದು ಆಟವಿದೆ. ಅದರ ಹೆಸರು "Telephone Game". ಇದು ಎಪ್ಪತ್ತರ ದಶಕದಲ್ಲಿ ರಿಚರ್ಡ್ ನಿಕ್ಸನ್ ಅಮೇರಿಕೆಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ನಡೆದ ಟೆಲಿಫೋನ್ ಕದ್ದಾಲಿಕೆಯ 'ವಾಟರಗೇಟ್ ಪ್ರಕರಣ' ಅಲ್ಲ. ಈ ಆಟವನ್ನು ಆಡುವ ವಿಧಾನ ಹೀಗಿದೆ: ಅಧ್ಯಾಪಕರು ತರಗತಿಯಲ್ಲಿರುವ ವಿದ್ಯಾರ್ಥಿಗಳನ್ನು ವೃತ್ತಾಕಾರದಲ್ಲಿ ಕೂರಿಸುತ್ತಾರೆ. ಮೊದಲನೆ ವಿದ್ಯಾರ್ಥಿಯ ಕಿವಿಯಲ್ಲಿ ಗುಟ್ಟಾಗಿ ಒಂದು ವಿಷಯವನ್ನು ಹೇಳುತ್ತಾರೆ. ಅದನ್ನು ಅವನು ಬೇರೆಯವರಿಗೆ ಕೇಳಿಸದಂತೆ ಪಕ್ಕದಲ್ಲಿ ಕುಳಿತ ವಿದ್ಯಾರ್ಥಿಯ ಕಿವಿಯಲ್ಲಿ ಹೇಳಬೇಕು. ಅವನೂ ಸಹ ಪಕ್ಕದ ವಿದ್ಯಾರ್ಥಿಗೆ ಅದನ್ನು ಗುಟ್ಟಾಗಿಯೇ ಹೇಳಬೇಕು. ಹೀಗೆ ಒಬ್ಬರಿಂದೊಬ್ಬರಿಗೆ ಬಾಯಿಂದ ಕಿವಿಗೆ, ಕಿವಿಯಿಂದ ಬಾಯಿಗೆ ಹರಿದು ಕೊನೆಯ ವಿದ್ಯಾರ್ಥಿಯ ಕಿವಿಯನ್ನು ತಲುಪಿದಾಗ ಅವನು ಎದ್ದು ನಿಂತು ತಾನು ಕೇಳಿಸಿಕೊಂಡದ್ದನ್ನು ಎಲ್ಲರಿಗೂ ಕೇಳುವಂತೆ ಗಟ್ಟಿಯಾಗಿ ಹೇಳಬೇಕು. ಈ ಆಟವನ್ನು ನಮ್ಮ ನಾಡಿನ ಎಲ್ಲ ಶಾಲೆಗಳಲ್ಲಿ ಮಕ್ಕಳಿಂದ ಆಡಿಸುವಂತೆ ನಮ್ಮ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸುವುದು ಒಳ್ಳೆಯದು. ಸಿರಿಗೆರೆಯ ನಮ್ಮ ಮಠದ ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ಆರ್ ವೆಂಕಟೇಶ ಶೆಟ್ಟಿಯವರು ಈ ಪ್ರಯೋಗವನ್ನು ಒಮ್ಮೆ ಮಾಡಿದ್ದರು. ಅವರು ಮೊದಲ ವಿದ್ಯಾರ್ಥಿಯ ಕಿವಿಯಲ್ಲಿ ಹೇಳಿದ್ದು ಇಷ್ಟು: "ಕಿರಣ್ ನಾಲ್ಕು ದಿನಗಳಿಂದ ಕ್ಲಾಸಿಗೆ ಬಂದಿಲ್ಲ. ಅವನಿಗೆ ಹುಷಾರಿದೆಯೋ ಇಲ್ಲವೋ ಗೊತ್ತಿಲ್ಲ!". ಈ ಮಾತುಗಳು ಮೊದಲನೆಯ ವಿದ್ಯಾರ್ಥಿಯ ಬಾಯಿಂದ ತರಗತಿಯ 40-50 ವಿದ್ಯಾರ್ಥಿಗಳ ಕಿವಿ-ಬಾಯಿ ಮೂಲಕ ಹರಿದು ಕೊನೆಯ ವಿದ್ಯಾರ್ಥಿಗೆ ತಲುಪುವಷ್ಟರಲ್ಲಿ ಏನೆಂದು ಸುದ್ದಿಯಾಗಿತ್ತು ಗೊತ್ತೆ? ಆ ಕೊನೆಯ ವಿದ್ಯಾರ್ಥಿ ತಾನು ಪಕ್ಕದವನಿಂದ ಕೇಳಿಸಿಕೊಂಡದ್ದನ್ನು ಗಟ್ಟಿಯಾಗಿ ಹೇಳಿದ್ದು ಹೀಗೆ: "ಕಿರಣ್‌ನನ್ನು ಆಸ್ಪತ್ರೆಗೆ ಸೇರಿಸಿದ್ದಾರಂತೆ. ತುಂಬಾ ಸೀರಿಯಸ್ ಅಂತೆ. ಅವನು ಉಳಿಯುವುದು ಕಷ್ಟ ಅಂತ ಡಾಕ್ಟರು ಹೇಳಿದ್ದಾರಂತೆ!"

ಇದು ಕೇವಲ ಶಾಲಾ-ಕಾಲೇಜಿನ ತರಗತಿಯಲ್ಲಷ್ಟೇ ಅಲ್ಲ, ನಮ್ಮ ದೇಶದ ಜನರ ಬದುಕಿನ ಸುತ್ತ ನಿತ್ಯ ಹರಿಯುವ ಗಾಳಿಸುದ್ದಿಗಳು ಹೇಗೆ ರೂಪುಗೊಳುತ್ತವೆ ಎಂಬುದಕ್ಕೆ ಮಾದರಿ. ಇದೇ ರೀತಿ ನಮ್ಮ ದೇಶದ ರಾಜಕೀಯ ಧುರೀಣರ ಮೇಲೆ ಏಕೆ ಪ್ರಯೋಗ ಮಾಡಬಾರದು ಎಂಬ ಆಲೋಚನೆ ಇದನ್ನು ಬರೆಯುವ ವೇಳೆ ನಮ್ಮ ಮನಸ್ಸಿನಲ್ಲಿ ಕ್ಷಣಕಾಲ ಸುಳಿದಾಡಿತು. ಹೇಗೂ ನಮ್ಮ ದೇಶದ ಪಾರ್ಲಿಮೆಂಟ್ ಭವನ ವೃತ್ತಾಕಾರವಾಗಿದೆ. ಅದರ ಸುತ್ತ ಇರುವ ಒಂದೊಂದು ಕಂಬದ ಅಡಿಯಲ್ಲಿ ವಿರೋಧಪಕ್ಷದ ನಾಯಕರೂ ಸೇರಿದಂತೆ ಎಲ್ಲ ಮಂತ್ರಿಗಳೂ ಮತ್ತು ಸಂಸದರನ್ನು ನಿಲ್ಲಿಸಿ ಪ್ರವೇಶದ್ವಾರದ ಆರಂಭದಲ್ಲಿರುವವರ ಕಿವಿಯಲ್ಲಿ ಅಣ್ಣಾ ಹಜಾರೆಯವರು ಭ್ರಷ್ಟಾಚಾರದ ವಿಚಾರವಾಗಿ ಏನಾದರೂ ಹೇಳಿದರೆ ಅವರ ಮಾತು ಪಾರ್ಲಿಮೆಂಟ್ ಸುತ್ತ ಗಿರಕಿ ಹೊಡೆದು ಕೊನೆಯಲ್ಲಿ ನಿಂತ ರಾಜಕೀಯ ಧುರೀಣರ ಬಾಯಲ್ಲಿ ಏನೆಂದು ಮಾರ್ದನಿಗೊಳಬಹುದು? ಓದುಗರ ಊಹೆಗೆ ಬಿಟ್ಟ ವಿಚಾರ! ಮೂತ್ರಪಿಂಡದ ತೊಂದರೆಯಿಂದ ಬಳಲುತ್ತಿದ್ದ ಜಯಪ್ರಕಾಶ್ ನಾರಾಯಣ್‌ರವರು ಬದುಕಿದ್ದಾಗಲೇ ಸತ್ತರೆಂದು ಗಾಳಿಸುದ್ದಿ ಹಬ್ಬಿ ಸಂತಾಪಸೂಚಕ ನಿರ್ಣಯವನ್ನೂ ಮಾಡಿದ ಹೆಗ್ಗಳಿಕೆ ನಮ್ಮ ದೇಶದ ಪಾರ್ಲಿಮೆಂಟಿನದು! ನಾಳೆ ಲೋಕಪಾಲವಿಧೇಯಕ ಅಂಗೀಕಾರವಾದರೂ ಇಂಥವರು ಇರುವವರೆಗೆ ಭ್ರಷ್ಟಾಚಾರ ನಿರ್ಮೂಲವಾಗುತ್ತದೆಯೇ ಎಂಬುದು ಯಕ್ಷಪ್ರಶ್ನೆಯಾಗಿದೆ. ರಾಜಕೀಯದಲ್ಲಿ ಗಾಳಿಮಾತುಗಳು ತೇಲಿಬರುವುದು ಸರ್ವೇ ಸಾಮಾನ್ಯ. ಸಚಿವ ಸಂಪುಟ ವಿಸ್ತರಣೆ/ಪುನಾರಚನೆ ಯಾವಾಗ ಆಗುತ್ತದೆ, ಯಾರಾರು ಸಚಿವರಾಗುತ್ತಾರೆ, ಯಾರಿಗೆ ಅರ್ಧಚಂದ್ರ ಪ್ರಯೋಗವಾಗುತ್ತದೆ, ಯಾರಿಗೆ ಯಾವ ಖಾತೆಯ ಯೋಗವಿದೆ, ಒಂದು ವೇಳೆ ಸಚಿವ ಸ್ಥಾನ ಸಿಗದಿದ್ದರೆ ಯಾರಾರಿಗೆ ನಿಗಮ ಮಂಡಲಿಗಳ ಗೂಟದ ಕಾರಿನ ಯೋಗವಿದೆ... ಹೀಗೆ ಗಾಳಿ ಮಾತಿನಿಂದಲೇ ಪತ್ರಿಕೆಗಳ ಪುಟಗಳು ಕೋಡಿವರಿಯುತ್ತವೆ.

ಹರಿವ ಹಳ್ಳಕೊಳ್ಳದ ನೀರು ಆರಂಭದಲ್ಲಿ ಕೊಳಕಾಗಿದ್ದರೂ ಹರಿಯುತ್ತಾ ಹರಿಯುತ್ತಾ ನಿರ್ಮಲವಾಗುತ್ತದೆ. ಆದರೆ ಜನರ ಬಾಯಲ್ಲಿ ಒಳ್ಳೆಯ ಸುದ್ದಿಗಳೂ ಬಾಯಿಂದ ಬಾಯಿಗೆ ಹರಿಯುವಾಗ ಕೊಳಕಾಗುತ್ತವೆ. ಅದಕ್ಕೆ ಕಾರಣ ನಮ್ಮ ಜನರ ಕೊಳಕು ಮನಸ್ಸು. ಗೊತ್ತಿಲ್ಲದ ಸಂಗತಿಯನ್ನು ಗೊತ್ತಿರುವಂತೆ ಹೇಳುವುದು ಭಾರತೀಯರ ಕೆಟ್ಟ ಜಾಯಮಾನ. ಗೊತ್ತಿರುವ/ಗೊತ್ತಿಲ್ಲದ ಯಾರದೋ ಬಗ್ಗೆ ಏನೋ ಒಂದು ಸುದ್ದಿ ಕೇಳಿಬರುತ್ತದೆ. ಅದಕ್ಕೆ ಕೇಳಲು ರಂಜನೆಯಾಗುವಂತೆ ಉಪ್ಪುಕಾರ ಹಚ್ಚಿ ಹರಿಯಬಿಡುತ್ತಾರೆ. ಅದು ಕಿವಿಯಿಂದ ಕಿವಿಗೆ ಹರಡಿ ಪ್ರತಿಯೊಬ್ಬರ ಬಾಯಿಂದ ಹೊರಬರುವಾಗಲೂ ಅವರ ಕೊಳಕು ಮನಸ್ಸಿನಲ್ಲಿ ಮತ್ತಷ್ಟೂ ವಿಕೃತಗೊಂಡು ಕಾಳ್ಗಿಚ್ಚಿನಂತೆ ದಟ್ಟವದಂತಿಯಾಗಿ ಹಬ್ಬುತ್ತದೆ.

ಗಾಳಿಸುದ್ದಿಗಳನ್ನು ಹಬ್ಬಿಸುವುದರಲ್ಲಿ ನಮ್ಮ ದೇಶದ ಜನ ಮಹಾನಿಪುಣರು. ಈ ಆರೋಪಕ್ಕೆ ನಮ್ಮ ಮಾಧ್ಯಮಗಳೂ ಹೊರತಲ್ಲ. ಅತಿರಂಜಿತ ಸುದ್ದಿಗಳನ್ನು ನೀಡಿ ಟಿ.ಆರ್.ಪಿ ಹೆಚ್ಚಿಸಿಕೊಳ್ಳುವ ಟಿ.ವಿ ವಾಹಿನಿಗಳು ಇಲ್ಲದಿಲ್ಲ. ಅಂತಹ ಗಾಳಿಸುದ್ದಿಗಳನ್ನು ಜನರೂ ಸಹ ಬಾಯಿ ಚಪ್ಪರಿಸಿಕೊಂಡು ಓದುತ್ತಾರೆ, ನೋಡುತ್ತಾರೆ. ಅನ್ಯರ ನೋವಿನಿಂದ ವಿಕೃತ ಆನಂದ ಪಡೆಯುವ ಜನರಿರುವವರೆಗೆ ಮಾಧ್ಯಮಗಳಲ್ಲಿ ಗಾಳಿ ಸುದ್ದಿಗಳು ಹರಿದಾಡುತ್ತವೆ; ತಮ್ಮ ಕ್ರೂರವಾದ ಕೋರೆದಾಡೆಗಳಿಂದ ಸಿಕ್ಕಸಿಕ್ಕವರನ್ನು ಇರಿಯುತ್ತವೆ! ಗಾಳಿ ಮಾತು ಹಬ್ಬಿಸುವವರಿಗೆ ದ್ವೇಷ ಇದ್ದೇ ಇರುತ್ತದೆ ಎಂದು ಹೇಳಲು ಬಾರದು. ಅವರಿಗೆ ಅದೊಂದು ಚಟ. ಅದು ಕೆಲವರಿಗೆ ಮೋಜು ಎನಿಸಬಹುದು. ಆದರೆ ಯಾರ ಬಗ್ಗೆ ಗಾಳಿಸುದ್ದಿಯನ್ನು ಹಬ್ಬಿಸಲಾಗುತ್ತದೆಯೋ ಅವರ ಪ್ರಾಣಕ್ಕೇ ಅದು ಎರವಾಗಬಹುದು ಎಂಬ ವಿವೇಕ ನಮ್ಮ ಜನರಿಗೆ ಇರುವುದಿಲ್ಲ. ಇದ್ದರೂ ಕೆಲವರು ವಿಘ್ನಸಂತೋಷಿಗಳು ಇರುತ್ತಾರೆ.

ಗಾಳಿ ಸುದ್ದಿ ಹಬ್ಬಿಸುವುದು ನಮ್ಮ ದೇಶದವರಿಗೆ ಮಾತ್ರ ಸೀಮಿತವಲ್ಲ. ಪರದೇಶಗಳಲ್ಲಿಯೂ ಇದೆ. ಅಮೇರಿಕೆಯ ಹೂಕ್‌ಸೆಟ್ (Hooksett) ಎಂಬ ನಗರದಲ್ಲಿ ಮಧ್ಯವಯಸ್ಕರಾದ ನಾಲ್ವರು ಮಹಿಳೆಯರನ್ನು ಕೆಲಸದಿಂದ ವಜಾ ಮಾಡಲಾಯಿತು. ಅವರ ಮೇಲಿದ್ದ ಆಪಾದನೆ ಅವರು ಕೆಲಸ ಮಾಡುತ್ತಿದ್ದ ಇಲಾಖೆಯ ಮೇಲಧಿಕಾರಿ ಮತ್ತು ಇನ್ನೊಬ್ಬ ಮಹಿಳೆಯ ಮಧ್ಯೆ ಅಕ್ರಮ ಸಂಬಂಧ ಕಲ್ಪಿಸಿ ಸುಳ್ಳಿನ ಕಂತೆ ಹರಡಿದ್ದು. ಅಧಿಕಾರಿಯು ನೀಡಿದ ದೂರಿನ ಮೇಲೆ ತನಿಖೆ ನಡೆದು ಮಿಥ್ಯಾರೋಪವೆಂದು ಸಾಬೀತಾಗಿ ಆ ಮಹಿಳೆಯರು ಕೆಲಸ ಕಳೆದುಕೊಳ್ಳಬೇಕಾಯಿತು. ತನಿಖಾಸಮಿತಿಯು ಅವರನ್ನು ಕೆಲಸದಿಂದ ವಜಾ ಮಾಡಲು ಕೊಟ್ಟ ಕಾರಣ: "ಇಂತಹ ಕಾಡು ಹರಟೆಯು ಆಫೀಸಿನಲ್ಲಿ ಕೆಲಸ ಮಾಡುವವರ ಮಧ್ಯೆ ಇರಬೇಕಾದ ಸ್ನೇಹಮಯ ವಾತಾವರಣವನ್ನು ಹಾಳುಮಾಡುತ್ತದೆ. ನೈತಿಕ ಸ್ಥೈರ್ಯವನ್ನು ಕುಗ್ಗಿಸುತ್ತದೆ. ಕಾರ್ಯದಕ್ಷತೆಯನ್ನು ಕ್ಷೀಣಿಸುವಂತೆ ಮಾಡುತ್ತದೆ."

ಸಿನೆಮಾ ಮತ್ತು ಕ್ರೀಡಾ ಸೆಲಬ್ರಿಟಿಗಳ ಬಗೆಗೆ ಗಾಳಿ ಸುದ್ದಿಗಳು ಹರಡುವುದು ಸರ್ವೇ ಸಾಮಾನ್ಯ. ಎಷ್ಟೋ ಪ್ರತಿಭೆಗಳು ಗಾಳಿಸುದ್ದಿಗಳಿಗೆ ಬಲಿಯಾಗಿ ಕಮರಿಹೋಗಿವೆ. ಗಾಳಿ ಮಾತುಗಳಿಂದ ಅನೇಕ ಯುವತಿಯರ ಮದುವೆಗಳು ನಿಂತು ಹೋಗಿವೆ. ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಎಂದು ಗಾದೆ ಹೇಳಿದರೆ, ಗಾಳಿ ಮಾತಿನ ಒಂದು ಸುಳ್ಳು ಸುದ್ದಿಯಿಂದ ಅನೇಕ ಮದುವೆಗಳು ನಿಂತುಹೋದ ಪ್ರಸಂಗಗಳಿವೆ. ಮದುವೆಯಾಗುವ ಹುಡುಗಿಯೊಂದಿಗೆ ತನಗೆ ಅಫೇರ್ ಇತ್ತು ಎಂಬ ಸುಳ್ಳು ಸುದ್ದಿಯನ್ನು ಹುಡುಗನಿಗೆ ತಲುಪಿಸುವುದು ಈ ದಿನಗಳಲ್ಲಿ ಕಷ್ಟವೇನಲ್ಲ. ಹಿಂದೆ ವಂಚನೆ, ವದಂತಿ, ಗಾಳಿಮಾತುಗಳು ನಿಧಾನವಾಗಿ ಇನ್ನೊಂದೆಡೆಗೆ ಸಾಗುತ್ತಿದ್ದವು. ಈಗ ಇ-ಮೇಲ್ ಬಂದ ಮೇಲೆ ಕ್ಷಣಮಾತ್ರದಲ್ಲಿ ಅವು ಚಲಿಸುತ್ತಿವೆ. ಸುದ್ದಿಯ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಯಾರು ಸಿದ್ಧರಿದ್ದಾರೆ? ಬೆಂಕಿ ಇಲ್ಲದೆ ಹೊಗೆಯಾಡುತ್ತದೆಯೇ ಎಂದು ತಮ್ಮ ಮೂಗಿನ ನೇರಕ್ಕೆ ಅರ್ಥೈಸುತ್ತಾರೆ. ಇನ್ನು ಗಂಡ-ಹೆಂಡಿರ ಮಧ್ಯೆ ಬಿರುಕು ಸಂಭವಿಸುವುದು ಗಾಳಿ ಮಾತುಗಳಿಂದಲೇ. ಪ್ರೀತಿವಿಶ್ವಾಸಗಳೇ ಬುನಾದಿಯಾಗಿರುವ ದಾಂಪತ್ಯ ಜೀವನದಲ್ಲಿ ಅವು ಅಲ್ಲೋಲ ಕಲ್ಲೋಲವನ್ನುಂಟುಮಾಡುತ್ತವೆ. ದಂಪತಿಗಳ ಪರಸ್ಪರ ನಂಬಿಕೆಯ ಬುಡವನ್ನು ಅಲ್ಲಾಡಿಸುವಂತೆ ಕೆಲವರು ವದಂತಿಗಳನ್ನು ಹರಡುತ್ತಾರೆ. ಮಂಗಳಸೂತ್ರ ಧರಿಸಿದ/ಧರಿಸಬೇಕಾದ ಮಹಿಳೆಯ/ಮದುಮಗಳ ಕೊರಳಿಗೆ ನೇಣಿನ ಹಗ್ಗ ಬಿಗಿಯುತ್ತದೆ.

ಗಾಳಿ ಮಾತುಗಳಿಗೆ ಕೋಮುಗಲಭೆಗಳ ಸಂದರ್ಭದಲ್ಲಿ ಎಲ್ಲಿಲ್ಲದ ರಕ್ಕೆಪುಕ್ಕಗಳು ಬಂದುಬಿಡುತ್ತವೆ. ನಮ್ಮ ಕೋಮಿನ ಹುಡುಗಿಯನ್ನು ಅನ್ಯಕೋಮಿನ ಹುಡುಗ ಹಾರಿಸಿಕೊಂಡು ಹೋಗಿದ್ದಾನೆ - ಎಂದು ಯಾರೋ ಹಬ್ಬಿಸುತ್ತಾರೆ; ಜನರು ನಂಬುತ್ತಾರೆ. ನೆರೆಹೊರೆಯಲ್ಲಿ ಅಣ್ಣತಮ್ಮಂದಿರಂತೆ ಪರಸ್ಪರ ಸಹಾಯ ಸಹಕಾರ ನೀಡುತ್ತಾ ಸೌಹಾರ್ದದಿಂದ ಬಾಳುತ್ತಿದ್ದರೂ ಆ ಎರಡು ಕೋಮಿನ ಜನರ ನಡುವೆ ಸಂಶಯದ ಅಡ್ಡ ಗೋಡೆಗಳೇಳುತ್ತವೆ. ಸಮೂಹ ಸನ್ನಿಗೆ ಒಳಗಾಗಿ ಕೋಮು ದಳ್ಳುರಿ ಹಬ್ಬುತ್ತದೆ. ಅನಾಹುತ ಆದ ಮೇಲೆ ಆ ಸುದ್ದಿ ಸುಳ್ಳೆಂದು ತಿಳಿಯುತ್ತದೆ. ಆದರೆ ಅಷ್ಟು ಹೊತ್ತಿಗೆ ಆಗಬಾರದ ಅನಾಹುತ ನೋಡನೋಡುತ್ತಿದ್ದಂತೆಯೇ ಆಗಿಹೋಗಿರುತ್ತದೆ; ಗಾಳಿಮಾತು ಹಬ್ಬಿಸುವವರ ಉದ್ದೇಶ ಈಡೇರಿರುತ್ತದೆ! ಅಂಥವರನ್ನು ಕಂಡೇ ಸಂಸ್ಕೃತಸೂಕ್ತಿಯೊಂದು ಹೀಗೆ ಹೇಳುತ್ತದೆ:

**ಅಹೋ ಖಲಭುಜಂಗಾನಾಂ ವಿಪರೀತೋ ಹಿ ವಧಕ್ರಮಃ ।**
**ಕರ್ಣೌ ದಶತಿ ಚೈಕಸ್ಯ ಪ್ರಾಣೈರನ್ಯೋ ವಿಯುಜ್ಯತೇ ॥**

ಇದರ ತಾತ್ಪರ್ಯ ಹೀಗಿದೆ: ವಿಷಜಂತುವಾದ ಹಾವಿಗಿಂತಲೂ ನಂಜುನಾಲಿಗೆಯ ಮನುಷ್ಯ ಹೆಚ್ಚು ಅಪಾಯಕಾರಿ. ಹಾವು ಯಾರನ್ನು ಕಚ್ಚುತ್ತದೆಯೋ ಅವನು ಸಾಯುತ್ತಾನೆ. ಆದರೆ ಚಾಡಿಕೋರ ಒಬ್ಬನ ಕಿವಿಯನ್ನು ಕಚ್ಚಿದರೆ ಮತ್ತೊಬ್ಬನು ಸಾಯುತ್ತಾನೆ.

ಜನರು ಮಾತನಾಡುವಾಗ ಎಚ್ಚರ ವಹಿಸಬೇಕು. 'ಎಲುಬಿಲ್ಲದ ನಾಲಿಗೆ' ಎಂಬ ಆರೋಪಕ್ಕೆ ಗುರಿಯಾಗುವಂತೆ ಮಾತನಾಡುವ ದುರಭ್ಯಾಸವನ್ನು ಕೈಬಿಡಬೇಕು. ಈ ಹಿನ್ನೆಲೆಯಲ್ಲಿಯೇ ಪುರಂದರ ದಾಸರು ಹೇಳಿದ್ದು:

**ಆಚಾರವಿಲ್ಲದ ನಾಲಿಗೆ, ನಿನ್ನ ನೀಚಬುದ್ಧಿಯ ಬಿಡು ನಾಲಿಗೆ**
**ವಿಚಾರವಿಲ್ಲದೆ ಪರರ ದೂಷಿಪುದಕ್ಕೆ ಚಾಚಿಕೊಂಡಿರುವಂಥ ನಾಲಿಗೆ!**

16.6.2011

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ